# ಹುಲಿಗಿಯ ಹುಲಿಗೆಮ್ಮ ದೇವಿ: ಒಂದು ಸಾಂಸ್ಕೃತಿಕ ನಂಬಿಕೆ

**ನಾಯಕರ ಹುಲುಗಪ್ಪ**

ಸಹಾಯಕ ಸಂಶೋಧನಾಧಿಕಾರಿ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ, ಶಿಗ್ಗಾವಿ, ಹಾವೇರಿ.

**Received: 10-07-2024 ; Acepted: 10-08-2024 ; Published: 07-09-2024**

**DOI: https://doi.org/10.5281/zenodo.13724881**

**ABSTRACT:**

ತುಂಗಾಭದ್ರ ನದಿಯ ಎಡದಂಡೆಯ ಮೇಲಿರುವ ಕೊಪ್ಪಳ ಜಿಲ್ಲೆಯ, ಕೊಪ್ಪಳ ತಾಲೂಕಿನ ಹಿಟ್ನಾಳ ಹೋಬಳಿಗೆ ಸೇರಿದ ಹುಲಿಗಿ ಗ್ರಾಮವು ಚಿಕ್ಕದಾದರೂ ಸಹ ಅದರ ಹೆಸರು ನೆರೆಯ ರಾಜ್ಯಗಳಿಗೂ ಹರಡಿಕೊಂಡಿದೆ. ಈ ಪ್ರದೇಶದಲ್ಲಿ ತುಂಗಾಭದ್ರ ನದಿ ಇರುವುದರಿಂದ ನೀರಾವರಿ ಸೌಲಭ್ಯದಿಂದಾಗಿ ಸದಾ ಭತ್ತ, ಕಬ್ಬುಗಳನ್ನು ಬೆಳೆಯುತ್ತಾ ಹಸಿರು ಸೀರೆಯುಟ್ಟಂತೆ ಕಂಗೊಳಿಸುತ್ತದೆ. ಹುಲಿಗಿ ಗ್ರಾಮದ ಜನಪದ ಸಂಸ್ಕೃತಿ ಇತಿಹಾಸವು ಕೊಪ್ಪಳ ಜಿಲ್ಲೆಯಿಂದ ಹೊರತಾಗಿರಲಿಲ್ಲ. ಜಿಲ್ಲೆಯ ಒಂದು ಭಾಗವಾಗಿರುವ ಹುಲಿಗಿ ಗ್ರಾಮವು ಅದರೊಂದಿಗೆ ತನ್ನ ಜನಪದ ಸಂಸ್ಕೃತಿ ಇತಿಹಾಸವನ್ನು ರೂಪಿಸಿಕೊಂಡಿದೆ.

ಈ ಪ್ರದೇಶದಲ್ಲಿ ಎಲ್ಲಾ ಧರ್ಮಗಳು ಕಂಡುಬರುತ್ತವೆ. ಶೈವ, ಜೈನ, ವೈಷ್ಣವ, ಶಕ್ತ ಪಂಥಗಳು ಈ ಗ್ರಾಮದಲ್ಲಿರುವುದನ್ನು ಅಲ್ಲಿರುವ ದೇವಾಲಯಗಳಲ್ಲಿ ಅವುಗಳನ್ನು ಆರಾಧಿಸುವುದರಿಂದ ಕಾಣಬಹುದು. ಹುಲಿಗಿ ಗ್ರಾಮದಲ್ಲಿ ಸೋಮೇಶ್ವರ, ಪಾರ್ಶ್ವನಾಥ, ರಾಮ, ಹನುಮಂತ ಹಾಗೂ ಊರಮ್ಮ ದೇವಿಯ ದೇವಾಲಯಗಳು ಇವೆ. ಈ ಗ್ರಾಮದ ಅತ್ಯಂತ ಪ್ರಾಚೀನವಾದ ದೇವಾಲಯವೆಂದರೆ ಪಂಚಲಿಂಗೇಶ್ವರ ದೇವಾಲಯ. ಈ ದೇವಾಲಯದಲ್ಲಿರುವ ಐದು ದೇಗುಲಗಳೊಂದಿಗೆ ಸೋಮೇಶ್ವರ ದೇವಾಲಯವು ಕ್ರಿ.ಶ. 1088 ರಲ್ಲಿ ಸೋಮನಾಥನೆಂಬುವನಿಂದ ನಿರ್ಮಿತನಾಗಿದೆ. ಈ ದೇವಾಲಯದ ಪಕ್ಕದಲ್ಲಿಯೇ ಎರಡು ಈಶ್ವರ ದೇವಾಲಯ, ದಕ್ಷಿಣದಲ್ಲಿ ಮತ್ತೆರಡು ಈಶ್ವರ ದೇವಾಲಯಗಳನ್ನು ಹೊಂದಿ ಇದಕ್ಕೆ ಪಂಚಲಿಂಗೇಶ್ವರ ದೇವಾಲಯವೆಂದು ಕರೆದಿರುವರು. ಇದರ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ನಿರ್ಮಿತಿಯಾಗಿದೆ. ಪಂಚಲಿಂಗೇಶ್ವರ ದೇವಾಲಯದ ನಿರ್ಮಾಣದ ಸಮಯದಲ್ಲಿಯೇ ಪಾರ್ಶ್ವನಾಥ ಬಸದಿಯನ್ನೂ ಸಹ ಈ ಗ್ರಾಮದಲ್ಲಿ ನಿರ್ಮಿಸಲಾಯಿತು.

ಈ ಗ್ರಾಮವು ಪ್ರಸಿದ್ಧಿಗೆ ಬಂದಿದ್ದು ಅಲ್ಲಿರುವ ಹುಲಿಗೆಮ್ಮ ದೇವಿಯ ದೇವಾಲಯದಿಂದ. ಹುಲಿಗೆಮ್ಮಳು ಎಲ್ಲಮ್ಮನ ಪರಮಾವತಾರವೆಂದು ಈ ಪ್ರದೇಶದ ಜನರ ನಂಬಿಕೆ. ಶಕ್ತಿ ದೇವತೆಯಾದ ಈ ಹುಲಿಗೆಮ್ಮಳು ಇಲ್ಲಿನ ಗ್ರಾಮದೇವತೆಯೂ ಆಗಿದ್ದಾಳೆ. ಉಗ್ರ ಸ್ವರೂಪಿಯಾಗಿರುವ ಈ ಮೂರ್ತಿಯನ್ನು ಶಾಂತಗೊಳಿಸುವ ಸಲುವಾಗಿ ಮೇಲಿಂದ ಮೇಲೆ ವಿಶೇಷ ಪೂಜೆ, ಪುನಸ್ಕಾರಗಳನ್ನು ಸಲ್ಲಿಸಲಾಗುತ್ತದೆ. ಎಲ್ಲಮ್ಮ ಹುಲಿಯ ಸವಾರಿ ಮಾಡಿದ್ದದರಿಂದ ಆಕೆಗೆ ಹುಲಿಗೆಮ್ಮ ಎಂಬ ಹೆಸರು ಬಂದಿತೆಂದು ಕೆಲವರ ನಂಬಿಕೆ. ಈ ದೇವಾಲಯವು 800 ವರ್ಷಗಳ ಹಿಂದೆ ನಿರ್ಮಾಣವಾಯಿತೆಂದು ಹೇಳಲಾಗುತ್ತದೆ. ಈ ದೇವಸ್ಥಾನದಲ್ಲಿ ಪ್ರತಿ ದಿನವೂ ಪೂಜಾಕಾರ್ಯಕ್ರಮಗಳಾದ ಕಂಕಣಧಾರಣೆ, ಬೋಳ ಹುಚ್ಚಯ್ಯನ ತೇರು ಮತ್ತು ಅಕ್ಕಿ ಪಡಿ ರಥೋತ್ಸವಗಳು ಸಾಮಾನ್ಯವಾಗಿ ಕಂಡುಬರುವಂತಹ ನಂಬಿಕೆ ಉತ್ಸವಗಳಾಗಿದ್ದರೆ, ಇಲ್ಲಿ ಕೊನೆಗೆ ನಡೆಯುವ ಬಾಳೆದಿಂಡಿನ ಉತ್ಸವ, ಪಾಯಸ

ಮತ್ತು ಕೊಂಡದ ಉತ್ಸವ ಇವುಗಳು ಇಲ್ಲಿಯ ಜನರ ನಂಬಿಕೆ ಮತ್ತು ಪವಾಡ ಮತ್ತು ಸಾಂಸ್ಕೃತಿಕ ಆಚರಣೆಗಳಾಗಿ ಕಂಡುಬರುತ್ತವೆ.

**KEYWORDS:**

ಸಂಸ್ಕೃತಿ, ನಂಬಿಕೆ, ಉತ್ಸವ, ಹಬ್ಬ , ಇತಿಹಾಸದೊಡನೆ ಸಂಬಂಧ, ಆಚರಣೆ.

ದಕ್ಷಿಣದ ಗಂಗೆಯೆಂದು ಕರೆಯುವ ತುಂಗಾಭದ್ರ ನದಿಯ ದಂಡೆಯಲ್ಲಿರುವ ಹುಲಿಗಿಯ ಹುಲಿಗೆಮ್ಮನ ದೇವಸ್ಥಾನವು ಸುಮಾರು 16-17ನೇ ಶತಮಾನದ ವಿಜಯನಗರ ಅರಸರ ಕಾಲಕ್ಕೆ ಸೇರಿದ್ದು. "ಈ ದೇವಸ್ಥಾನವು ಗರ್ಭಗೃಹ, ಅಂತರಾಳ, ಸಭಾಮಂಟಪ, ಮುಖಮಂಟಪ ಹಾಗೂ ದ್ವಾರ ಗೋಪುರಗಳನ್ನು ಒಳಗೊಂಡಿದೆ. ಈ ಭಾಗದ ಪ್ರಸಿದ್ಧ ದೇವತೆ ಹುಲಿಗೆಮ್ಮ ದೇವಿಯ ಮೂರ್ತಿಯು ಈ ದೇವಾಲಯದಲ್ಲಿದೆ. ಒಂಭತ್ತು ಅಂಕಣಗಳಿಂದ ಕೂಡಿದ ಸಭಾಮಂಟಪವು ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡಿದೆ. ಇಲ್ಲಿರುವ ನಾಲ್ಕು ಕಂಬಗಳು ಚಚ್ಚೌಕವಾಗಿವೆ. ಸಭಾಮಂಟಪದ ಮುಂಬದಿಯಲ್ಲಿ ಹದಿನಾರು ಕಂಬಗಳಿರುವ ಮಹಾಮಂಟಪವು ಇತ್ತೀಚಿಗೆ ನಿರ್ಮಾಣವಾದದ್ದು. ಗರ್ಭಗೃಹದ ಮೇಲ್ಭಾಗದಲ್ಲಿ ಶಿಖರವಿದ್ದು ಇದನ್ನು ಆಧುನಿಕ ಶೈಲಿಯಲ್ಲಿ ಅಂದರೆ ಪಿರಮಡ್ ಆಕಾರದಲ್ಲಿ ನಿರ್ಮಿಸಲಾಗಿದೆ. ದೇಗುಲದ ಮುಂಭಾಗದಲ್ಲಿ ಸುಮಾರು ನಲವತ್ತು ಅಡಿ ಎತ್ತರದ ಗರುಡ ಸ್ತಂಭವಿದೆ. ಈ ಸ್ತಂಭದಲ್ಲಿ ಗರುಡ ಮತ್ತು ನಾಗಬಂಧುಗಳ ಚಿತ್ರಣಗಳಿವೆ" (ಸಂ. ಡಾ.ಕೆ.ಎಂ.ಸುರೇಶ, ಡಾ.ವಾಸುದೇವ ಬಡಿಗೇರ, ಡಾ.ಎಸ್.ವೈ.ಸೋಮಶೇಖರ್, ಡಾ. ಮಾಡಲಗೇರಿ ಕೊಟ್ರೇಶ್, ಕರ್ನಾಟಕ ದೇವಾಲಯ ಕೋಶ : ಕೊಪ್ಪಳ ಜಿಲ್ಲೆ, ಪ್ರಸಾರಾಂಗ, ಕವಿವಿ, ಹಂಪಿ. ಪು.ಸಂ.79). ಹೀಗೆ ಭೌತಿಕವಾಗಿ ಕಂಡುಬರುವ ದೇವಸ್ಥಾನ ಮತ್ತು ಊರಿನ ಬಗ್ಗೆ ಜನಪದರಲ್ಲಿ ಹಲವಾರು ಸಾಂಸ್ಕೃತಿಕ ನಂಬಿಕೆಗಳಿವೆ.

ಗ್ರಾಮವನ್ನೆ ಕುರಿತು ನೋಡುವುದಾದರೆ ಹುಲಿಗಿ ಗ್ರಾಮ ನದಿಯ ದಡದಲ್ಲಿರುವುದರಿಂದ ನದಿಯಲ್ಲಿ ನೀರು ಕುಡಿಯಲು ಹುಲಿಗಳು ಬರುತ್ತಿದ್ದವು, ಹಾಗಾಗಿ ಇದನ್ನು 'ಹುಲಿಯೂರು' ಅಥವಾ 'ವ್ಯಾಘ್ರಪುರ' ಹೆಸರಿನಿಂದ ಕರೆಯಲಾಗುತ್ತಿತ್ತು. ಆದುದರಿಂದ ಇಲ್ಲಿ ನೆಲೆಸಿರುವ ದೇವತೆಯನ್ನು 'ವ್ಯಾಘ್ರೇಶ್ವರಿ' ಎಂದು ಕರೆಯುತ್ತಿದ್ದರು. ಸುಮಾರು 800 ವರ್ಷಗಳಿಂದ ಈ ತಾಯಿಗೆ ಪೂಜೆ ಪುನಸ್ಕಾರ ಹೋಮ-ಹವನ ಮುಂತಾದ ಧಾರ್ಮಿಕ ಕಾರ್ಯಕ್ರಮ ವಿಧಿವಿಧಾನಗಳು ನಡೆದುಕೊಂಡು ಬಂದಿವೆ. ಈಗ ಅದು 'ಹುಲಿಗಿ'ಯಾಗಿ ಅಲ್ಲಿ ನೆಲಸಿರುವ ದೇವೆತೆ 'ಹುಲಿಗೆಮ್ಮ' ಎಂದು ಜನಪದರಲ್ಲಿ ಚಾಲ್ತಿಯಲ್ಲಿದೆ.

ಈ ಕ್ಷೇತ್ರದ ಪೌರಾಣಿಕ ಪರಂಪರೆ ನೋಡುವುದಾದರೆ, ಹುಲಿಗೆಮ್ಮನಿಗೆ ಹಿನ್ನೆಲೆಯಾಗಿ ಹೇಳುವ ಕಥೆ ಮತ್ತು ಸವದತ್ತಿಯ ಎಲ್ಲಮ್ಮನಿಗೆ ಹಿನ್ನೆಲೆಯಾಗಿ ಹೇಳುವ ಕಥೆಯು ಬಹುಮಟ್ಟಿಗೆ ಒಂದೇ ಆಗಿದೆ. ಎಲ್ಲಮ್ಮನೆ ಹುಲಿಗೆಮ್ಮನ ರೂಪದಲ್ಲಿ 'ಹುಲಿಗಿ'ಯಲ್ಲಿ ಪ್ರತ್ಯಕ್ಷವಾಗಿದ್ದಾಳೆ ಎಂಬ ನಂಬಿಕೆಯು ಜನಪದರಲ್ಲಿದೆ. "ವಾಯು ಪುರಾಣ, ಅಗ್ನಿ ಪುರಾಣ,

ಮಾರ್ಕಾಂಡೇಯ ಪುರಾಣ, ಸ್ಕಂದ ಪುರಾಣ ಮಾತ್ರವಲ್ಲದೆ ಸುಪ್ರಸಿದ್ಧವಾದ ರಾಮಾಯಣ ಮತ್ತು ಮಹಾಭಾರತಗಳಲ್ಲಿ ಉಪಲಬ್ಧವಿರುವ ಪರಶುರಾಮನ ಕಥೆಯೇಯಾಗಿದೆ. ಜಮದಗ್ನಿ-ರೇಣುಕ ಮತ್ತು ಪರುಶುರಾಮರೇ ಇಲ್ಲಿನ ಮುಖ್ಯ ಪಾತ್ರಗಳು. ಪುರಾಣಗಳ ವ್ಯಾಪ್ತಿಯನ್ನು ಮತ್ತು ಜನಪದರಲ್ಲಿ ಈ ಕಥೆ ಪ್ರಸರಣ ಗೊಂಡಿರುವ ಬಗೆಯನ್ನು ಗಮನಿಸಿದರೆ ಈ ಕಥೆಯು ತುಂಬಾ ಜನಪ್ರಿಯವಾಗಿರುವುದಂತೂ ಸ್ಪಷ್ಟ" (ಡಾ. ಕಲಬುರ್ಗಿ.ಎಂ. ಎಂ(ಸಂ.), ಜನಪದ ಸಾಹಿತ್ಯ ದರ್ಶನ, ಭಾ-2. ಪು.64). ಎಂಟು ನೂರು ವರ್ಷದ ಹಿಂದೆ ಭಕ್ತರಿಬ್ಬರು ಪ್ರತಿ ಹುಣ್ಣಿಮೆಯೆಂದು ಸವದತ್ತಿಗೆ ಹೋಗುವ ವಾಡಿಕೆ. ಒಮ್ಮೆ ಹುಣ್ಣಿಮೆಯೆಂದು ಸವದತ್ತಿಗೆ ಹೋಗುವಾಗ ತುಂಬಾ ಗಾಳಿ ಮಳೆಯಿಂದಾಗಿ ಸಮಯಕ್ಕೆ ಹೋಗಲು ಸಾಧ್ಯವಾಗಲಿಲ್ಲ. ಅವರ ಭಕ್ತಿಗೆ ಮೆಚ್ಚಿದ ಸವದತ್ತಿ ಎಲ್ಲಮ್ಮ ದೇವಿ ಅವರಿಗೆ ಅರ್ಧ ದಾರಿಯಲ್ಲಿಯೇ ದರ್ಶನ ಕೊಟ್ಟು , ನೀವು ಇನ್ನೂ ಮೇಲೆ ಇಲ್ಲಿ ಬರುವ ಅವಶ್ಯಕತೆ ಇಲ್ಲ, ನಾನೇ ನಿಮ್ಮ ಊರಿಗೆ ಬಂದು ನೆಲೆಸುತ್ತೇನೆ ಎಂದು ಹೇಳಿ ಅನುಗ್ರಹಿಸುತ್ತಾಳೆ. ಅಂದಿನಿಂದ ಅದು 'ವ್ಯಾಘ್ರಪುರಿ'ಯಾಗಿ ನಂತರ ಹುಲಿಗಿಯಾಗಿ ಬದಲಾಗಿರುವುದನ್ನ ನಾವು ಕಾಣಬಹುದು. ಇನ್ನೊಂದು ಅಭಿಪ್ರಾಯದ ಪ್ರಕಾರ, ನಾಗಲಾಪುರ ಎಂಬ ಗ್ರಾಮದಲ್ಲಿ ಮುದ್ದಮ್ಮಮ್ಮ ಎಂಬ ತಾಯಿ ಇದ್ದಳು. ಅವಳು ಶಿವನ ಭಕ್ತಳು. ಅವಳಿಗೆ ಸಕಲ ಐಶ್ವರ್ಯ ಇದ್ದರು ಅವಳಿಗೆ ಮಕ್ಕಳ ಫಲ ಇರಲಿಲ್ಲ. ಗೊಡ್ಡಿ ಎಂಬ ಹೆಸರು ಬಿದ್ದಿತ್ತು. ಒಂದು ದಿನ ಅವಳು ಮಲಗಿರಲು ಸಾಕ್ಷತ್ ಶಿವನೇ ಪಾರ್ವತಿಗೆ ಸೂಚಿಸಿ ಅವಳಿಗೆ ಮಕ್ಕಳ ಭಾಗ್ಯ ಕೊಟ್ಟು ಬರಲು ಸೂಚಿಸುವನು. ಅಧರ ಫಲವಾಗಿ ಹೊಸೂರಮ್ಮ ಮತ್ತು ಹುಲಿಗೆಮ್ಮ ಎಂಬ ಇಬ್ಬರು ಹೆಣ್ಣು ಮಕ್ಕಳು ಹುಟ್ಟಿದರು. ಇವರಿಬ್ಬರೂ ದೊಡ್ಡವರಾದ ಮೇಲೆ ಹೊಸೂರಮ್ಮ ನದಿಯ ಬಲದಂಡೆಯ ಮೇಲೆ ನೆಲೆಸಿದರೆ, ಎಡದಂಡೆಯ ಮೇಲೆ ಹುಲಿಗೆಮ್ಮ ನೆಲೆಸಿದಳು. ಇವೇ ಗ್ರಾಮಗಳು ಇಂದು 'ಹೊಸೂರಮ್ಮ' ನೆಲೆಸಿರುವ ಊರು ಹೊಸೂರು ಆದರೆ, 'ಹುಲಿಗೆಮ್ಮ ದೇವಿ' ನೆಲೆಸಿದ ಊರು ಹುಲಿಗಿಯಾಯಿತು. ಹೀಗೆ ಹಲವಾರು ಸಾಂಸ್ಕೃತಿಕ ನಂಬಿಕೆಗಳು ಹುಲಿಗೆಮ್ಮ ದೇವಿಯ ಕುರಿತು ಇರುವುದು ನಾವು ಕಾಣುತ್ತೇವೆ. ಇನ್ನೂ ಐತಿಹಾಸಿಕವಾಗಿ ನೋಡುವುದಾದರೆ, ಕಲ್ಯಾಣದ ಚಾಲುಕ್ಯರ ಪ್ರಸಿದ್ಧ ದೊರೆ ಆರನೆಯ ವಿಕ್ರಮಾದಿತ್ಯನ "ಕ್ರಿ.ಶ. 1088 ರ ಶಾಸನವೊಂದು ಹುಲಿಗಿಯಲ್ಲಿಯೇ ಲಭ್ಯವಾಗಿರುವುದರಿಂದ ಆ ಕಾಲದಿಂದ ಹುಲಿಗಿ ಗ್ರಾಮದ ಇತಿಹಾಸವು ಇನ್ನಷ್ಟು ಸ್ಪಷ್ಟವಾಗುತ್ತದೆ. 49 ಸಾಲುಗಳನ್ನು ಹೊಂದಿರುವ ಈ ಶಾಸನವು ಆ ಗ್ರಾಮದ ಸೋಮೇಶ್ವರ ದೇವಾಲಯದಲ್ಲಿದೆ. ಕಾಮಕಾಯನ ಗೋತ್ರದ ನಾರಾಯಣ ಭಟ್ಟುಪಾಧ್ಯಾಯನ ಮಗ ಶ್ರೀ ಚೌವೇದಿಭಟ್ಟನು ಹುಲಿಗಿ ಎಂಬ ಪುರವನ್ನು ತ್ರೈಲೋಕ್ಯಮಲ್ಲನಿಂದ ಪಡೆದುಕೊಂಡಿರುವುದನ್ನು ಮತ್ತು ತುಂಗಭದ್ರಾ ನದಿಯಿಂದ ಸೀಳುನಾಲೆಯಾದುದನ್ನು ಹಾಗೂ ಚೌವೇದಿಭಟ್ಟನ ವಂಶಾವಳಿಯನ್ನು ಈ ಶಾಸನವು ವಿವರಿಸುತ್ತದೆ" (ದೇವರಕೊಂಡಾರೆಡ್ಡಿ (ಸಂ.), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-2, ಕೊಪ್ಪಳ ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1999, ಪು. 28).

ಹುಲಿಗೆಮ್ಮ ದೇವಿಯ ಕುರಿತ ನಂಬಿಕೆಗಳನ್ನು ಕುರಿತು ನೋಡುವುದಾದರೆ ಜಾತ್ರೆಯ ಸಂದರ್ಭದಲ್ಲಿ ಹಲವಾರು ನಂಬಿಕೆಗಳಿವೆ: ಹುಲಿಗೆಮ್ಮನ ಜಾತ್ರೆಯ ಸಂದರ್ಭದಲ್ಲಿ

ಆರು ದಿನಗಳು ಹಲವಾರು ಕಾರ್ಯಕ್ರಮಗಳು ಅತ್ಯಂತ ವಿಜೃಂಭಣೆಯಿಂದ ಜರುಗುತ್ತವೆ. ಅವುಗಳಲ್ಲಿ ಕಂಕಣ ಕಟ್ಟುವುದು ಒಂದು. ವೈಶಾಖ ಬಹುಳ ಪ್ರತಿಪದ ದಿನದಂದು ಈ ಉತ್ಸವವನ್ನು ಆಗಿ ಹುಣ್ಣಿಮೆಯ ಮರುದಿವಸ ಕಂಕಣಭರಣ ಕಾರ್ಯಕ್ರಮವೆಂದು ಆಚರಿಸಲಾಗುತ್ತದೆ. ಇದನ್ನು ಜಾತ್ರೆಯ ಪ್ರಾರಂಭದ ಹಂತವೆಂತಲೂ ಕರೆಯಬಹುದು. ಈ ದಿವಸ ಸಾಯಂಕಾಲದ ಹೊತ್ತಿಗೆ ದೇವಾಲಯದ ಮುಂದೆ ಸಾವಿರಾರು ಸಂಖ್ಯೆಯಲ್ಲಿ ಭಕ್ತ ಜನರು ಸೇರಿರುತ್ತಾರೆ. ಅಂದು ಸಾಯಂಕಾಲದ ಹೊತ್ತಿಗೆ "ಪೂಜಾರಿಗಳು ಸ್ನಾನಮಾಡಿ ಮುಡಿಯುಟ್ಟು , ದೇವಸ್ಥಾನಕ್ಕೆ ಬಂದು, ಹೋಮ-ಹವನಗಳನ್ನು ದೇವಿಯ ಮುಂದೆ ನಡೆಸಿ ಅವಳಿಗೆ ಸಮರ್ಪಿಸುವರು. ನಂತರ ಹುಲಿಗೆಮ್ಮ ದೇವಿಯನ್ನು ಆಭರಣ, ಪಟ್ಟ ಪೀತಾಂಬರ, ಹೂ-ಹಾರಗಳಿಂದ ಸಿಂಗರಿಸಿ ಅಲಂಕಾರಗೈಯುವರು. ಗಂಗಾಮತಸ್ಥರಾದ ನಾಗಜೋಗಿ ಮತ್ತು ಬಸವಜೋಗಿ ಮನೆತನದವರು ದೇವಸ್ಥಾನಕ್ಕೆ ಬಂದ ನಂತರ ದೇವಿಯ ಕೈಗೆ ಕಂಕಣವೊಂದನ್ನು ತೊಡಿಸುತ್ತಾರೆ. ಈ ಕಂಕಣ ತೊಡಿಸುವಿಕೆಯಿಂದ ಜಾತ್ರೆಯ ವಿಧಿ ವಿಧಾನಗಳು ಪ್ರಾರಂಭವಾಗುವವೆಂದು ಜನತೆ ನಂಬುತ್ತಾರೆ" (ಹಿರೇಮಠ ಎಸ್. ಎಸ್., ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ, ಭಾಗ-2 ಜಾತ್ರೆಗಳು, ಪು25). ಕಂಕಣಭರಣ ತೊಡಿಸಿದ ನಂತರ ಮುಂದೆ ಅಂದರೆ ಸಪ್ತಮಿಯ ದಿನದವರೆಗೆ ಕೇವಲ ದೇವಿಗೆ ಪೂಜೆ ಮಾತ್ರ ನಡೆಯುತ್ತದೆ. ಬೇರೆ ಯಾವುದೇ ಕಾರ್ಯಕ್ರಮಗಳು ಅಲ್ಲಿ ನಡೆಯುವುದಿಲ್ಲ. ಆದರೆ ಅಷ್ಟಮಿಯ ದಿನದಿಂದ ಇತರೆ ಕಾರ್ಯಕ್ರಮಗಳು ಮುಂದೆ ಪ್ರತಿದಿನವೂ ಜರುಗುತ್ತವೆ.

ತದನಂತರ ಬೋಳ ಹುಚ್ಚಯ್ಯನ ರಥೋತ್ಸವ. ವೈಶಾಖ ಬಹುಳ ಅಷ್ಟಮಿಯೆಂದು ಕಂಕಣಾಭರಣ ತೊಡಿಸುವ ಉತ್ಸವ ನಡೆದ ನಂತರ ಎಂಟನೆಯ ದಿನಕ್ಕೆ ಅಂದರೆ, ವೈಶಾಖ ಬಹುಳ ಅಷ್ಟಮಿಯ ದಿನದಂದು ಬೋಳ ಹುಚ್ಚಯ್ಯನ ರಥೋತ್ಸವವನ್ನು ಆಚರಿಸುತ್ತಾರೆ. ಈ ಆಚರಣೆಯ ಸಮಯದಲ್ಲಿ ಮೊದಲಿಗೆ ಪಂಜನ್ನು ಹಿಡಿದುಕೊಂಡು ಗ್ರಾಮದ ಪ್ರಮುಖ ವ್ಯಕ್ತಿಗಳು ಗಂಗಾಮತಸ್ಥ ಪೂಜಾರಿಗಳ ಮನೆಗೆ ಹೋಗಿ ಅವರನ್ನು ದೇವಸ್ಥಾನಕ್ಕೆ ಕರೆತರುತ್ತಾರೆ. ಹಾಗೆ ಕರೆದುಕೊಂಡು ಬಂದ ಮೇಲೆ ದೇವಾಲಯದಲ್ಲಿ ದೇವಿಯ ಪೂಜೆಯನ್ನು ಮಾಡಿ, ದೇವಿಯ ಉತ್ಸವಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟುಕೊಂಡು ಬೋಳ ಹುಚ್ಚಯ್ಯನ ರಥದವರೆಗೂ ತರುತ್ತಾರೆ. ಹಾಗೆ ಸುತ್ತು ಹಾಕುವಾಗ ಮೂರು ಸ್ಥಳಗಳಲ್ಲಿ ಪಲ್ಲಕ್ಕಿಯನ್ನು ನಿಲ್ಲಿಸಿ ಹಾಡುಗಳನ್ನು ಹಾಡುವರು.

ಪಲ್ಲಕ್ಕಿಯನ್ನು ಮೊದಲನೆಯ ಸ್ಥಳದಲ್ಲಿ ಅಂದರೆ ಪಶ್ಚಿಮ ದಿಕ್ಕಿಗೆ ತಂದು ನಿಲ್ಲಿಸಿದಾಗ ಈ ಕೆಳಗಿನ ಹಾಡನ್ನು ಹಾಡಲಾಗುತ್ತದೆ.

**"ಅಂಬ ಪಾಲಿಸು ಎನ್ನ ನೀನು!ಜಗ**
**ದಂಬಾ ನಿನ್ನಯ ಪಾದವನ್ನು ನಂಬಿದೆ!!**
**ದೇವಿ ಪಾಲಿಸುಯನ್ನ ನೀನು!!ಪ!!**
**ಮೂರು ಭಾವದಿ ನಂಬದೋದೆ! ಬಲು**
**ಘೋರ ಸಂಸಾರದ ಶರಧಿಯೋಳಾದ!!**
**ಪಾರು ಮಾಡೆಂದು ಕೈಮುಗಿದೆ! ಏನ**
**ಗಾರು ಹಿತವರಿಲ್ಲಾ ನೀನೆ ಗತಿಯೆಂದೆ!!**
**ದಿವಿಜರ ಮೊರೆಯನ್ನು ಕೇಳಿ! ಬಲು**

**ತವಕದಿಂದ ಸುರರ ಕುಲವನ್ನು ಸೀಳಿ!!**
**ಅವನಿಯೊಳಗೆ ಶಾಂತತಾಳಿ! ಅನು**
**ಭವ ದೃಷ್ಟಿಯಿಂದ ಭಕ್ತರ ಮೊರೆಯ ಕೇಳಿ!!**
**ದಿನಕರ ಕೋಟಿ ಪ್ರಕಾಶ!ಬಹು**
**ಘನವಿದ್ದೂ ಸೂರುಹಳಿಗೆ ಶಕ್ತಿ ವಿಲಾಸೇ!! ಅನುಕೂಲವಾಗಿ ಪಾಲಿಸೇ! ಸ್ವಾಮಿ**
**ಕನಕಗಿರೀಶನ ಮನದೊಳುಲಹಸೇ!!"**

(ಕಡೇತೋಟದ ಎನ್. ಕೆ., ಎಲ್ಲಮ್ಮನ ಜೋಗತಿಯರು ಹಾಗೂ ದೇವದಾಸಿ ಪದ್ಧತಿ, ಪ್ರಸಾರಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1983, ಪುಟ. 148).

ಹೀಗೆ ಅಂಬಾ ನಾನು ನಿನ್ನ ನಂಬಿ ಬಂದಿರುವೆ, ನನ್ನ ಕೈ ಬಿಡಬೇಡ. ಸಂಸಾರ ಸಾಗರದ ಜಂಜಾಟದಲ್ಲಿ ಮುಳುಗಿದಾಗ ಮಹಾಜನರು ತನ್ನ ಹಿಡಿದು ಮುನ್ನಡೆಸಿ, ನಿನ್ನ ಕಾಣಲು ಬೆಳಕು ತೋರಿದರು. ಈಗ ನಾನು ನಿನ್ನನ್ನೇ ನಂಬಿ ಬಂದಿರುವೆ ನನ್ನನ್ನು ಹರಸು ತಾಯಿ ಎಂದು ಮೊದಲ ಪದ್ಯವನ್ನು ಹಾಡುತ್ತಾರೆ.

ಅಕ್ಕಿಪಡಿ ಉತ್ಸವ ವೈಶಾಖ ಬಹಳ ನವಮಿಯ ದಿನದಂದು ಬೆಳಗ್ಗೆ ಭಕ್ತರ ಸಮೂಹದಲ್ಲಿ ಹರಕೆ ಹೊತ್ತುವರು ದೀಡ(ದಿಂಡ) ನಮಸ್ಕಾರ ಹಾಕುತ್ತಾರೆ. ಅದೇ ದಿವಸ ಸಾಯಂಕಾಲದ ವೇಳೆಗೆ ಅಕ್ಕಿಪಡ್ಡಿ ಮತ್ತು ತೇರಿನ ಉತ್ಸವಗಳು ಜರುಗುತ್ತವೆ. ಹುಲಿಗಿಯ ಹುಲಿಗೆಮ್ಮ ದೇವತೆಯಲ್ಲಿ ಪವಾಡಗಳೇ ಹೆಚ್ಚಾಗಿದ್ದರಿಂದ, ಅಲ್ಲಿ ಮೊದಲೆಲ್ಲಾ ರಥವನ್ನು ಎಳೆಯುತ್ತಿರಲಿಲ್ಲ. ಕೇವಲ ಅಕ್ಕಿಪಡಿ ಉತ್ಸವವನ್ನು ಮಾತ್ರ ಆಚರಿಸಲಾಗುತ್ತಿತ್ತು. ಜಾತ್ರೆಯಲ್ಲಿ ತೇರು ಎಳೆಯದಿದ್ದರೆ ಅದು ಜಾತ್ರೆಯೇ ಅಲ್ಲ ಎಂಬ ಅಭಿಪ್ರಾಯವನ್ನು ಭಕ್ತರು ವ್ಯಕ್ತಪಡಿಸಿದ್ದರಿಂದ ಅವರ ಭಕ್ತಿ, ಭಾವನೆಗಳಿಗೆ ಸ್ಪಂದಿಸಿ ಸುಮಾರು 2001-02 ರಿಂದ ತೇರನ್ನು ಎಳೆಯುವ ಏರ್ಪಾಡು ಮಾಡಲಾಗಿದೆ ಎಂದು ತಿಳಿಯುತ್ತದೆ.

ಬಾಳೆದಿಂಡಿನ ಉತ್ಸವ, ಹುಲಿಗೆಮ್ಮನ ಜಾತ್ರೆಯ ಉತ್ಸವಗಳಲ್ಲಿ ಇದು ಅತ್ಯಂತ ಪ್ರಧಾನವಾದ ಉತ್ಸವವಾಗಿದೆ. ಇದನ್ನು 'ಬಾಳೆದಿಂಡಿ ಪವಾಡ' ಎಂದು ಕರೆಯುತ್ತಾರೆ. ಇದನ್ನು ನಾಗಜೋಗಿ ಮತ್ತು ಬಸವಜೋಗಿ ಮನೆತನಕ್ಕೆ ಸೇರಿದ ದಂಡಿನವರು ನಡೆಸಿಕೊಡುತ್ತಾರೆ. "ದಶಮಿಯ ದಿನ ಬೆಳಿಗ್ಗೆ ಊರ ಪ್ರಮುಖರು, ಪೂಜಾರಿಗಳು ಮತ್ತು ಗಂಗಾಮತಸ್ಥರ ಮನೆತನದವರೆಲ್ಲರೂ ಸೇರಿಕೊಂಡು ತುಂಗಭದ್ರಾ ನದಿಗೆ ಹೋಗುತ್ತಾರೆ. ಅಲ್ಲಿಯೇ ಎಲ್ಲರೂ ಸ್ನಾನಮಾಡಿಕೊಂಡು ಮಡಿಯಾಗುತ್ತಾರೆ. ಇಲ್ಲಿನ ಒಂದು ವಿಶೇಷವಂದರೆ ಈ ಪೂಜಾರಿಗೆ ಕ್ಷೌರವನ್ನು ವರ್ಷಕ್ಕೆ ಒಂದು ಬಾರಿ ಮಾತ್ರ ಮಾಡಲಾಗುತ್ತದೆ. ಆ ದಿನ ಸಾಯಂಕಾಲದ ವೇಳೆಗೆ ಬಾಳೆದಂಡನ್ನು ತಂದು ದೇವಾಲಯದಲ್ಲಿ ದೇವಿಯ ಮುಂದಿಟ್ಟು ಪೂಜೆ ಸಲ್ಲಿಸುವರು. ಇದಾದ ಸ್ವಲ್ಪ ಹೊತ್ತಿನ ಬಳಿಕ ಕೊಂಡದ ಪೂಜೆಯನ್ನು ಮಾಡುವರು. ತದನಂತರ ಬಾಳೆದಿಂಡನ್ನು ಬಾಳೆದಿಂಡಿನವರ ಮನೆಗೆ ಹೋಗಿ ಇಡುತ್ತಾರೆ. ರಾತ್ರಿ 2.00 ಗಂಟೆಯ ಸಮಾರಿಗೆ ಪಂಜು, ವಾದ್ಯಗಳ ಮೇಳದೊಂದಿಗೆ ಬಾಳೆದಿಂಡಿನವರ ಮನೆಗೆ ಹೋಗಿ ಬಾಳೆದಿಂಡನ್ನು ತೆಗೆದುಕೊಂಡು ಬರುತ್ತಾರೆ. ದಿಂಡನ್ನು ದೇವಾಲಯದಲ್ಲಿಟ್ಟು ಹೊಳೆಗೆ ಹೋಗಿ ಸ್ನಾನ ಮಾಡಿಕೊಂಡು ದೇವಾಲಯಕ್ಕೆ ಬರುತ್ತಾರೆ. ದೇವಾಲಯದಲ್ಲಿ ಪೂಜೆ ಸಲ್ಲಿಸಿ ದೇವಿಯಿಂದ ವರವನ್ನು ಪಡೆದುಕೊಳ್ಳುತ್ತಾರೆ. ಗಂಗಾಮತಸ್ಥರ ಐದು

ಮನೆತನದ ಪ್ರಮುಖರು ದೇವಿಯ ಹಾಗೆ ಮುಖಕ್ಕೆಲ್ಲಾ ಗಂಧ, ಕುಂಕುಮ ಮತ್ತು ಅರಿಶಿಣಗಳನ್ನು ಬಳಿದುಕೊಳ್ಳುತ್ತಾರೆ. ತಲೆ ಹಾಗೂ ಕೊರಳಲ್ಲಿ ಹೂವಿನ ಮಾಲೆಗಳನ್ನು ಹಾಕಿಕೊಳ್ಳುತ್ತಾರೆ. ಹೀಗೆ ಮಾಡಲು ಅವರು ಕೊಡುವ ಕಾರಣವೆಂದರೆ ಮೊದಲು ಇವುಗಳನ್ನೆಲ್ಲಾ ದೇವಿಯೇ ಮಾಡಿ ತೋರಿಸಿದ್ದಳು, ಅವಳ ಪ್ರತಿರೂಪ ಎಂಬ ನಂಬಿಕೆಯಲ್ಲಿ ನಾವು ಅವಳ ಹಾಗೆಯೇ ವೇಷವನ್ನು ಧರಿಸಿ, ಈಗ ಆ ಉತ್ಸವಗಳನ್ನು ನಡೆಸಿಕೊಳ್ಳುತ್ತೇವೆ ಎನ್ನುತ್ತಾರೆ". (ಪುರುಷೋತ್ತಮ ಬೆಳಿಮಲೆ, ಹುಲಿಗೆಮ್ಮ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, 1999, ಪು. 24).

ತದನಂತರ ಬಾಳೆದಿಂಡಿನಿಂದ ಮಾಡಿದ ಪಲ್ಲಕ್ಕಿಯನ್ನು ಹೊರ ತರುತ್ತಾರೆ. ಬಾಳೆದಿಂಡಿನ ಪೂಜಾರಿಯು ಉತ್ಸವಮೂರ್ತಿಯನ್ನು ಹಿಡಿದುಕೊಂಡು ದಂಡಿನ ಪಲ್ಲಕ್ಕಿಯ ಮೇಲೆ ಕುಳಿತುಕೊಳ್ಳುತ್ತಾರೆ. ಅದನ್ನು ಉಳಿದ ಪೂಜಾರಿಗಳು ಹಿಡಿದುಕೊಂಡು ದಂಡಿನ ಪಲ್ಲಕ್ಕಿಯ ಮೇಲೆ ಕುಳಿತುಕೊಳ್ಳುತ್ತಾರೆ. ಅದನ್ನು ಉಳಿದ ಪೂಜಾರಿಗಳು ಹಿಡಿದುಕೊಂಡು ಮುಂದೆ ಸಾಗುತ್ತಾರೆ. ಇವರು ದೇವಾಲಯದ ಹೊರಗಿರುವ ಪ್ರದಕ್ಷಿಣಾ ಪಥಕ್ಕೆ ಮೂರು ಸುತ್ತು ಹಾಕಿ, ದೇವಾಲಯದ ಒಳಗೆ ಹೋಗುತ್ತಾರೆ. ಪ್ರದಕ್ಷಿಣೆ ಹಾಕುವ ಸಮಯದಲ್ಲಿ ದೇವಾಲಯದಲ್ಲಿರುವ ಎಲ್ಲ ವಿದ್ಯುತ್ ದೀಪಗಳನ್ನು ಆರಿಸಲಾಗುತ್ತದೆ. ಹಾಗಾಗಿ ಕೇವಲ ಪಂಜಿನ ಬೆಳಕಿನಲ್ಲಿ ಈ ಉತ್ಸವ ನಡೆಯುತ್ತದೆ. ಆಗ ಅಲ್ಲಿರುವ ಪೂಜಾರಿಗಳೆಲ್ಲ ಉಗ್ರ ಸ್ವರೂಪರಾಗಿ ಕಾಣುತ್ತಿರುತ್ತಾರೆ. ಈ ಸಮಯದ ಛಾಯಾಚಿತ್ರವನ್ನು ತೆಗೆಯುವುದು ಕಡ್ಡಾಯವಾಗಿ ನಿಷೇಧಿಸಲಾಗಿದೆಯೆಂದು ತಿಳಿದು ಬಂದಿತು. ಪ್ರದಕ್ಷಿಣೆ ಮುಗಿದ ಬಳಿಕ ಮತ್ತೊಮ್ಮೆ ದೇವಿಗೆ ಪೂಜೆ ಸಲ್ಲಿಸಲಾಗುತ್ತದೆ. ಪೂಜೆಯ ನಂತರ ಭಕ್ತರಿಗೆಲ್ಲ ಪ್ರಸಾದವನ್ನು ಹಂಚಲಾಗುವುದು. ನಂತರ ಪೂಜಾರಿಗಳನ್ನು ಛತ್ರ, ಛಾಮರಗಳೊಂದಿಗೆ ಊರಿನಲ್ಲಿ ಮೆರವಣಿಗೆಯನ್ನು ಮಾಡುತ್ತಾರೆ. ಪೂಜಾರಿಗಳು ಊರ ಪ್ರಮುಖರ ಮನೆಗೆ ಹೋಗಿ, ಮನೆಯಲ್ಲಿರುವವರನ್ನು ಆಶೀರ್ವದಿಸಿ ಬರುತ್ತಾರೆ. ಕೊನೆಗೆ ಪೂಜಾರಿಗಳನ್ನು ಅವರವರ ಮನೆಗೆ ಮೆರವಣಿಗೆಯ ಮೂಲಕವೇ ಬೀಳ್ಕೊಡಲಾಗುತ್ತದೆ.

ಇಲ್ಲಿ ಗಮನಿಸಬಹುದಾದ ಮತ್ತೊಂದು ಮಹತ್ವದ ವಿಷಯವೆಂದರೆ, ಈ ಬಾಳೆದಿಂಡಿನ ಉತ್ಸವವನ್ನು ಮಾಡುವಾಗ ಮೆರವಣಿಗೆಗೆ ಬಳಸಲಾಗುವ ಆ ಬಾಳೆಯ ದಿಂಡು ಸ್ವಲ್ಪವೂ ಮುರಿಯುವುದಿಲ್ಲ ಮತ್ತು ಸೀಳುವುದಿಲ್ಲವೆಂಬುದು ಭಕ್ತರ ನಂಬಿಕೆ.

ಪಾಯಸ ಉತ್ಸವ(ವೈಶಾಖ ಶುದ್ಧ ಏಕಾದಶಿ)ವು "ಏಕಾದಶಿಯ ದಿನ ಸಾಯಂಕಾಲ ಪಾಯಸ ತಯಾರಿಸಲು ಬೇಕಾದ ಹೊಸ ಗಡಿಗೆಯನ್ನು ತಂದು, ಪಾಯಸದವರ ಮನೆಯಲ್ಲಿಟ್ಟು ಅದಕ್ಕೆ ಪೂಜೆ ಸಲ್ಲಿಸುತ್ತಾರೆ. ಮರುದಿವಸ ಅಂದರೆ ದ್ವಾದಶಿಯ ಬೆಳಗಿನ ಜಾವದ ಬ್ರಾಹ್ಮೀ ಮುಹೂರ್ತದಲ್ಲಿ ಅಂದರೆ ಬೆಳಿಗ್ಗೆ 2.00 ರಿಂದ 3.00ಗಂಟೆಯ ಸಮಯದಲ್ಲಿ ಕಾರ್ಯಕ್ರಮವು ಪ್ರಾರಂಭವಾಗುತ್ತದೆ. ಪಾಯಸದ ಉತ್ಸವಕ್ಕೆ ಪಾಯಸದವರ ಪೂಜಾರಿಗಳು ಮುಖ್ಯವಾಗಿರುತ್ತಾರೆ. ಬೆಳಗಿನ ಜಾವವೇ ಪಾಯಸದವರ ಮನೆಯಿಂದ ಗಡಿಗೆಯನ್ನು ಮೆರವಣಿಗೆಯ ಮೂಲಕ ತರುತ್ತಾರೆ. ದೇವಾಲಯದಿಂದ ದೇವಿಯ ಮೂರ್ತಿ ಮತ್ತು ಗಡಿಗೆಯನ್ನು ತೆಗೆದುಕೊಂಡು ನದಿಗೆ ಹೋಗಲಾಗುತ್ತದೆ. ಅಲ್ಲಿ

ಪಾಯಸಕ್ಕೆ ಸಂಬಂಧಿಸಿದ ಪೂಜಾರಿಯ ಕ್ಷೌರವಾಗುತ್ತದೆ. ಇದನ್ನು ಸಹ ವರ್ಷಕ್ಕೆ ಒಂದು ಬಾರಿ ಮಾತ್ರ ಮಾಡುತ್ತಾರೆ. ಅಲ್ಲಿ ಎಲ್ಲರೂ ಸ್ನಾನ ಮಾಡಿಕೊಂಡು ದೇವಾಲಯಕ್ಕೆ ಮರಳುತ್ತಾರೆ. ದೇವಾಲಯದ ಮುಂಭಾಗದಲ್ಲಿ ಅಂದರೆ ಮುಖ ಮಂಟಪದ ಮುಂದೆ ಒಂದು ಅಗಲವಾದ ಕಲ್ಲಿನ ಹಲಗೆಯನ್ನು ಇಟ್ಟಿರುತ್ತಾರೆ. ಅದರ ಮೇಲೆ ಮೂರು ಕಲ್ಲು ಗುಂಡುಗಳನ್ನು ಇಟ್ಟು , ಅದರ ಮೇಲೆ ಹಾಲಿನಲ್ಲಿ ಅದ್ದಿದ ರುಮಾಲನ್ನು ಇಡುತ್ತಾರೆ. ಅದರ ಮೇಲೆ ನದಿಯಿಂದ ತಂದ ಪಾಯಸದ ಗಡಿಗೆಯನ್ನು ಸ್ಥಾಪಿಸಲಾಗುತ್ತದೆ. ಪಾಯಸಕ್ಕೆ ಬೇಕಾದ ಅಕ್ಕಿಯನ್ನು ಊರಿನ ಪ್ರಮುಖ ವ್ಯಕ್ತಿಗಳೊಬ್ಬರಾದ ಪೊಲೀಸ್ ಗೌಡರ ಮನೆಯಿಂದ 5 ಕೆ.ಜಿ. ಅಕ್ಕಿಯನ್ನು ತರಲಾಗುತ್ತದೆ. ಪೂಜಾರಿಗಳು ದೇವಾಲಯದಲ್ಲಿ ಪೂಜೆ ಸಲ್ಲಿಸಿ ಅಲ್ಲಿಂದಲೇ ಒಲೆಗೆ ಅಗ್ನಿಯನ್ನು ತರುತ್ತಾರೆ. ಒಲೆ ಹೊತ್ತಿಸಿ, ನೀರು, ಅಕ್ಕಿಗಳನ್ನು ಹಾಕಿ ಪಾಯಸ ತಯಾರಿಸಲು ಇಡಲಾಗುತ್ತದೆ. ಪಾಯಸವನ್ನು ಗಂಧದ ಚಕ್ಕಿಯಿಂದಲೇ ತಯಾರಿಸಲಾಗುತ್ತದೆ. ಪಾಯಸ ತಯಾರಾಗುವಾಗ ದೇವಿಯ ಗರ್ಭಗುಡಿಯಲ್ಲಿ ಮಂತ್ರಗಳ ಪಠಣೆಯ ಜೊತೆಗೆ ಪ್ರಸಾದವನ್ನು ಕೇಳುತ್ತಾರೆ. ಈ ವಿಧಿ-ವಿಧಾನಗಳನ್ನು ಐದು ಬಾರಿ ಮಾಡಲಾಗುವುದು" (ಪುರುಷೋತ್ತಮ ಬೆಳಿಮಲೆ, ಹುಲಿಗೆಮ್ಮ , ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, 1999, ಪು. 25).

ಇಲ್ಲಿ ಪ್ರಸಾದ ಕೇಳುವುದು ಎಂದರೆ ಹೂವನ್ನು ತೆಗೆದುಕೊಂಡು, ಅದರಿಂದ ಚಂಡನ್ನು ಮಾಡಿ ದೇವಿಯ ತಲೆಯ ಮೇಲೆ ಇಡುತ್ತಾರೆ. ಮಂತ್ರಗಳ ಉಚ್ಚಾರಣೆಯಾದ ನಂತರ, ಹೂವಿನ ಚೆಂಡು ಕೆಳಗೆ ಬೀಳುತ್ತದೆ. ಇದನ್ನೇ ಪ್ರಸಾದ ಕೇಳುವುದು ಎಂದು ಹೇಳುಲಾಗುತ್ತದೆ. ಪ್ರಸಾದ ಕೇಳುವುದನ್ನು ದೇವಸ್ಥಾನದ ಹೊರಗಡೆ ನೆರೆದಿರುವ ಭಕ್ತರಿಗೆಲ್ಲ ಸ್ಕ್ರೀನ್ ಮೂಲಕ ತೋರಿಸಲಾಗುತದೆ. ಇತ್ತ ಪ್ರಸಾದ ಕೇಳುವುದು ಮುಗಿಯುತ್ತಲೇ, ಅತ್ತ ಪಾಯಸವು ಸಿದ್ಧವಾಗುತ್ತದೆ. ಪಾಯಸದವರು ಮತ್ತು ಬಾಳೆದಿಂಡಿನವರು ಬಿಸಿಬಿಸಿಯಾದ ಆ ಪಾಯಸವನ್ನು ಬರಿಗೈಯಲ್ಲಿ ತೆಗೆದು, ಪಾತ್ರೆಗೆ ಹಾಕಿಕೊಂಡು ದೇವಿಯ ಎದುರು ನೈವೇದ್ಯ ಮಾಡುತ್ತಾರೆ. ಇದನ್ನು ಮೂರು ಬಾರಿ ಮಾಡಲಾಗುತ್ತದೆ. ಪಾಯಸ ಮಾಡುವ ಗಡಿಗೆಯ ಕಂಠಕ್ಕೆ ಹೂವಿನ ಮಾಲೆಯನ್ನು ಸುತ್ತಲಾಗುತ್ತದೆ. ಅಲ್ಲದೇ ಇಲ್ಲಿ ಗಮನಿಸಬಹುದಾದ ಇನ್ನೊಂದು ಅಂಶವೆಂದರೆ ಹಾಗೆ ಪಾಯಸ ಮಾಡುವ ಗಡಿಗೆಯ ಕಂಠಕ್ಕೆ ಸುತ್ತಿರುವ ಹೂವಿನ ಮಾಲೆಯು ಬಲೆಯ ಜಲಕ್ಕೆ ಹೂವು ಬಾಡುವುದು ಸಹಜ. ಆದರೆ ಇಲ್ಲಿ ಹೂವು ಬಾಡುವುದಾಗಲಿ, ಒಣಗುವುದಾಗಲಿ ಆಗುವುದಿಲ್ಲ. ಅದೇ ಪ್ರಕಾರ ಈ ಹಿಂದೆ ನೋಡಿದಂತೆ ಬಾಳೆದಿಂಡಿನ ಉತ್ಸವದಲ್ಲಿ ದಿಂಡಿನ ಮೇಲೆ ವ್ಯಕ್ತಿಯೊಬ್ಬರು ಕುಳಿತರು ಸಹ ಅದು ಮುರಿಯುವುದಿಲ್ಲ ಮತ್ತು ಸೀಳುವುದಿಲ್ಲ. ಇವುಗಳು ಹುಲಿಗೆಮ್ಮನ ಪವಾಡಗಳೆಂದು ಅಲ್ಲಿನ ಜನರ ನಂಬಿಕೆಯಾಗಿದೆ. ಹೀಗೆ ಹುಲಿಗಿಯಲ್ಲಿ ನಡೆಯುವ ಕೊಂಡದ ಉತ್ಸವವು ಹುಲಿಗೆಮ್ಮನ ಶಕ್ತಿ ಪ್ರದರ್ಶನದ ಭಾಗವಾಗಿ ಕಾರ್ಯನಿರ್ವಹಿಸುತ್ತಿದೆ. ಕೊಂಡ ನೋಡುವ ಭಕ್ತರು ದೈವದ ಶಕ್ತಿಗೆ ಇನ್ನಷ್ಟು ತಲೆಬಾಗುತ್ತಾರೆ. ಕೆಂಡವು ಆರಿ ಬೂದಿಯಾದ ನಂತರ ಭಕ್ತರು ಅದನ್ನು ತೆಗೆದುಕೊಂಡು ಹೋಗಿ ತಮ್ಮ ತಮ್ಮ ಹೊಲದಲ್ಲಿ ಹಾಕುತ್ತಾರೆ. ಇದರಿಂದ ಫಸಲು ಚೆನ್ನಾಗಿ ಬರುತ್ತದೆ ಎಂದು ಅವರು ನಂಬುತ್ತಾರೆ.

ಒಟ್ಟಿನಲ್ಲಿ ಹುಲಿಗಿಯ ಜಾತ್ರೆಯ ಮೊದಲ ಮೂರು ಕಾರ್ಯಕ್ರಮಗಳಾದ

ಕಂಕಣಧಾರಣೆ, ಬೋಳ ಹುಚ್ಚಯ್ಯನ ತೇರು ಮತ್ತು ಅಕ್ಕಿ ಪಡಿ ರಥೋತ್ಸವಗಳು ಸಾಮಾನ್ಯವಾಗಿ ಎಲ್ಲ ಜಾತ್ರೆಗಳಲ್ಲಿ ಕಂಡುಬರುವಂತಹ ನಂಬಿಕೆ ಉತ್ಸವಗಳಾಗಿದ್ದರೆ, ಇಲ್ಲಿ ಕೊನೆಗೆ ನಡೆಯುವ ಬಾಳೆದಿಂಡಿನ ಉತ್ಸವ, ಪಾಯಸ ಮತ್ತು ಕೊಂಡದ ಉತ್ಸವ ಇವುಗಳು ಇಲ್ಲಿಯ ಜನರ ನಂಬಿಕೆ ಮತ್ತು ಪವಾಡ ಮತ್ತು ಸಾಂಸ್ಕೃತಿಕ ಆಚರಣೆಗಳಾಗಿ ಕಂಡುಬರುತ್ತವೆ.

## ಪರಾಮರ್ಶನ ಗ್ರಂಥಗಳು:


1. ಕಲಬುರ್ಗಿ ಎಂ. ಎಂ. (1987). ಜಾನಪದ ಸಾಹಿತ್ಯ ದರ್ಶನ: ಭಾಗ-2. ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ.
2. ಕಡೇತೋಟದ ಎನ್. ಕೆ. (1983). ಎಲ್ಲಮ್ಮನ ಜೋಗತಿಯರು ಹಾಗೂ ದೇವದಾಸಿ ಪದ್ಧತಿ. ಪ್ರಸಾರಂಗ, ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ.
3. ಕೃಷ್ಣಕುಮಾರ ಸಿ. ಪಿ. (2016), ಶಾಸನಶಾಸ್ತ್ರ ಪೀಠಿಕೆ. ಮಾನಸ ಬುಕ್‌ಹೌಸ್. ಮೈಸೂರು.
4. ಚನ್ನಕ್ಕ ಎಲಿಗಾರ. (1990). ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ. ಪ್ರಸಾರಂಗ, ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ.
5. ಚಿನ್ನಪ್ಪ ಗೌಡ ಕೆ. (1990). ಭೂತಾರಾಧನೆ ಜಾನಪದೀಯ ಅಧ್ಯಯನ. ಮದಿಪು ಪ್ರಕಾಶನ. ಮಂಗಳೂರು.
6. ಚಿದಾನಂದಮೂರ್ತಿ ಎಂ. (1979). ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ.450-1150). ಮೈಸೂರು ವಿಶ್ವವಿದ್ಯಾಲಯ. ಮೈಸೂರು.
7. ದೇವರಕೊಂಡಾರೆಡ್ಡಿ (ಸಂ). (1999). ಕನ್ನಡ ವಿಶ್ವವಿದ್ಯಾಲಯ: ಶಾಸನ ಸಂಪುಟ-2 (ಕೊಪ್ಪಳ ಜಿಲ್ಲೆ). ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
8. ಪುರುಷೋತ್ತಮ ಬಿಳಿಮಲೆ. (1999). ಹುಲಿಗೆಮ್ಮ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
9. ಪುರುಷೋತ್ತಮ ಬಿಳಿಮಲೆ. (1995). ಹಂಪಿ ಜಾನಪದ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
10. ಬಸವರಾಧ್ಯ ಎನ್. (ಪ್ರ.ಸಂ.). (2010). ಕನ್ನಡ-ಕನ್ನಡ ನಿಘಂಟು. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.